ಪಿ.ಡಬ್ಲ್ಯೂ-1

**ದಿನಾಂಕ 01-09-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮಧ್ಯಂತರ ಅರ್ಜಿ ಸಂಖ್ಯೆ 10 ಮತ್ತು 11 ರ ಮೇಲೆ ಆದ ಆದೇಶದಂತೆ**
**ಮುಂದುವರೆದ ಮುಖ್ಯ ವಿಚಾರಣೆ :ಶ್ರೀ.ಎಮ್.ಎ.ಎಚ್ ವಕೀಲರಿಂದ ವಾದಿ ಪರವಾಗಿ**

ನಾನು ಈಗ ಸರ್ವೆ ನಂ.8/2 ರ 1963-64 ರಿಂದ 1970-71, 1974-75 ರಿಂದ 2002-2003 ರವರೆಗಿನ ಕೈಬರಹ ಪಹಣಿ ಪತ್ರಿಕೆಗಳ ದೃಢೀಕೃತ ನಕಲು ಹಾಜರಪಡಿಸಿದ್ದೇನೆ. (ಪ್ರತಿವಾದಿ ಪರ ವಕೀಲರು ಈ ದಿನ ಹಾಜರಪಡಿಸಿದ ದಾಖಲಾತಿಗಳು ದಾವಾ ಆಸ್ತಿಗೆ ಸಂಬಂಧ ಇಲ್ಲ ಎಂದು, ಸದರಿ ದಾಖಲಾತಿಗಳನ್ನು ಗುರುತಿಸಲು ಆಕ್ಷೇಪಿಸಿದ್ದು, ವಾದಿ ಪರ ವಕೀಲರು ಸದರಿ ಆಸ್ತಿಗಳಿಗೂ ಮತ್ತು ತಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ ಮತ್ತು ಸಾಕ್ಷಿಯ ತಂದೆ ಮಲ್ಲಪ್ಪ ಅವರಲ್ಲಿ ಯಾವುದೇ ಪಾಲು ಬಂದಿಲ್ಲ ಎಂದು ತೋರಿಸಲು ಸದರಿ ದಾಖಲಾತಿಗಳನ್ನು ಹಾಜರಪಡಿಸಿದ್ದೇನೆ ಎಂದು ನುಡಿದಿದ್ದು, ಪ್ರತಿವಾದ ಪತ್ರದಲ್ಲಿ ಸದರಿ ಸರ್ವೆ ನಂಬರಗಳ ಬಗ್ಗೆ ನಿಖರವಾಗಿ ನಮೂದಿಸಿದ ಕಾರಣ ಆಕ್ಷೇಪಣೆ ತಳ್ಳಿ ಹಾಕಿ ಸದರಿ ದಾಖಲಾತಿಗಳನ್ನು ನಿಶಾನೆ ಎಂದು ಗುರುತಿಸಲಾಯಿತು) ಅವುಗಳನ್ನು ಒಟ್ಟಾಗಿ ನಿಪಿ-11 ಎಂದು, ಸರ್ವೆ ನಂ.9/3 ರ 1963-64 ರಿಂದ 1969-70, 1974-75 ರಿಂದ 1980-81, 1988-89 ರಿಂದ 2002-2003 ರವರೆಗಿನ ಕೈಬರಹ ಪಹಣಿ ಪತ್ರಿಕೆಗಳ ದೃಢೀಕೃತ ನಕಲು ಹಾಜರಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-12 ಎಂದು ಗುರುತಿಸಲಾಯಿತು. ಸರ್ವೆ ನಂ.8/2 ಮತ್ತು 9/3 ರ 2025-26 ರ ಪಹಣಿ ಪತ್ರಿಕೆಗಳನ್ನು ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-13 ಮತ್ತು ನಿಪಿ-14 ಎಂದು ಗುರುತಿಸಲಾಯಿತು.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ